ಶ್ರೀ ಎನ್. ರಾಜಣ್ಣ :- ಮಾನ್ಯ ಸಭಾಧ್ಯಕ್ಷರೆ, ಮೊದಲನೆಯ ಪ್ರಶ್ನೆಗೆ ಮಾನ್ಯ ಸಚಿವರು ಮೂರು ಕಾಲೇಜುಗಳು ಬೆಂಗಳೂರಿನಲ್ಲಿದೆ ಎಂದು ತಿಳಿಸಿದ್ದಾರೆ. ಆದರೆ ಮಹಿಳೆಯರ ಕಾಲೇಜು ಬೆಂಗಳೂರಿನಲ್ಲಿ ಮೂರು ಆದರೆ ಮೂಲೆಯಲ್ಲಿವೆ? 50 ಲಕ್ಷ ಜನಸಂಖ್ಯೆ ಇರತಕ್ಕ ಈ ನಗರದಲ್ಲಿ ಮೂರು ಕಾಲೇಜು ಇದ್ದರೆ ಸಾಕಾಗುತ್ತದೆಯೇ? ಎರಡನೆಯದು ಆ ಕಾಲೇಜಿಗೆ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಹೆಣ್ಣು ಮಕ್ಕಳು ಬಸ್‌ನಲ್ಲಿ ಹೋಗಬೇಕಾದರೆ ಬಹಳ ತೊಂದರೆ ಆಗಿ ತಂದೆತಾಯಿಗಳು ಕಾಲೇಜಿಗೇ ಕಳುಹಿಸದೇ ಇರತಕ್ಕ ಪರಿಸ್ಥಿತಿ ಇದೆ. ಆಮೇಲೆ ಪ್ರೈವೇಟ್ ಕಾಲೇಜು ಬೆಂಗಳೂರಿನಲ್ಲಿ ಕಿಲಮೇ ಇದೆ. ಆದರಲ್ಲಿ ಸೀಟಿಗೋಸ್ಕರ ಈವನ್ ಮಿನಿಸ್ಟರ್ಸ್ ಹೋಗಿ ಕ್ಯೂನಲ್ಲಿ ನಿಂತು ಕೊಂಡರೂ ಕಾಲೇಜಿನಲ್ಲಿ ಸೀಟ್ ಕೊಡುತ್ತಿಲ್ಲ, ಆ ಮಟ್ಟಕ್ಕೆ ಬಂದಿದೆ ಸ್ವಾಮಿ. ದಯವಿಟ್ಟು ಬೆಂಗಳೂರು ಉತ್ತರ- ಭಾಗದಲ್ಲಿ ಯಾವುದಾದರೂ ಕಾಲೇಜು ತೆಗೆಯುವುದಕ್ಕೆ ತಮ್ಮಲ್ಲಿ ಸ್ಕೀಮ್ ಇದೆಯಾ? ಅಥವಾ ಏನಾದರೂ ಮಾಡುತ್ತೀರಾ? ಯಾವಾಗ ಮಾಡುತ್ತೀರೆಂಬುದನ್ನು ತಿಳಿಸಬೇಕು.

ಶ್ರೀ ಬಿ. ಸೋಮಶೇಖರ್ :- ರಾಜ್ಯದಲ್ಲಿ ಒಟ್ಟು 149 ಸರ್ಕಾರಿ ಕಾಲೇಜುಗಳಲ್ಲಿ 9 ಮಹಿಳಾ ಕಾಲೇಜುಗಳು ಇವೆ. 9 ಮಹಿಳಾ ಕಾಲೇಜುಗಳಲ್ಲಿ ಮೂರು ಮಹಿಳಾ ಕಾಲೇಜುಗಳು ನಮ್ಮ ಬೆಂಗಳೂರಿನಲ್ಲಿದೆ. ಒಂದು ಸರ್ಕಾರಿ ಕಲಾ ಮಹಿಳಾ ಕಾಲೇಜು, ಮತ್ತೊಂದು ಸರ್ಕಾರೀ ವಿಜ್ಞಾನ ಘಟಕ, ಮತ್ತೊಂದು ಶ್ರೀಮತಿ ವಿಎಚ್‌ಡಿ ಗೃಹ ವಿಜ್ಞಾನ ಕಾಲೇಜು, ಬೆಂಗಳೂರು. ಮತ್ತು ಇವರು ಕೇಳಿರತಕ್ಕ ಭಾಗದಲ್ಲಿ ಯಾವುದೇ ಒಂದು ಪ್ರಸ್ತಾವನೆ ಬಂದಿಲ್ಲ. ಆ ಭಾಗದಲ್ಲಿ ಅವಶ್ಯಕತೆ ಇದೆ ಎನ್ನುವುದು ಕಂಡು ಬಂದರೆ ಸರ್ಕಾರ ಪರಿಶೀಲನೆ ಮಾಡಿ ಮುಂದಿನ ವರ್ಷ ಯೋಚನೆ ಮಾಡುತ್ತದೆ.

ಶ್ರೀ ಎನ್. ರಾಜಣ್ಣ :- ಭಾರತೀ ನಗರ, ಶಾಂತಿ ನಗರ, ಶಿವಾಜಿನಗರ, ಮತ್ತು ಜಯಮಹಲ್ ಈ ನಾಲ್ಕು ಜಾಗದಲ್ಲಿ ಕಾಲೇಜು ಇಲ್ಲ. ಬೇಕಾದರೆ ಕಾಲೇಜಿಗೆ ಬಿಲ್ಡಿಂಗ್ ಬಗ್ಗೆ ನಮ್ಮ ಭಾರತೀ ನಗರದಲ್ಲಿ ಒಂದು ಮಿಡಲ್ ಸ್ಕೂಲ್ ಇದೆ, ಅಲ್ಲಿ ಮಕ್ಕಳು ಕಡಿಮೆ ಆಗಿದ್ದಾರೆ. ಅದನ್ನೇ ಮುಂದಿನ ವರ್ಷಕ್ಕೆ ತಾವು ಕಾಲೇಜು ಆಗಿ ತೆಗೆಯಲು ಏರ್ಪಾಡು ಮಾಡಿಕೊಂಡರೆ ಒಳ್ಳೆಯದು.

ಶ್ರೀ ಬಿ. ಸೋಮಶೇಖರ್ :- ಅದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು :- ಇದೊಂದು ಒಳ್ಳೆಯ ಐಡಿಯಾ ಮಿಡಲ್ ಸ್ಕೂಲನ್ನು ಕಾಲೇಜು ಮಾಡುವುದು.

ವಿಷಯ :- ರಾಜ್ಯದ ಕೇಂದ್ರ ಗ್ರಂಥಾಲಯದಲ್ಲಿ ಮೈಕ್ರೋ ಫಿಲಂ ಸೌಲಭ್ಯ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 203 (1214)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :- ಮಾನ್ಯ ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಕೇಂದ್ರ ಗ್ರಂಥಾಲಯದಲ್ಲಿ ಮೈಕ್ರೋ ಫಿಲಂಗೆ ಸೌಲಭ್ಯ ಒದಗಿಸಲಾಗಿದೆಯೇ?

ಆ) ಇಲ್ಲದಿದ್ದಲ್ಲಿ ಈ ಸೌಲಭ್ಯ ಒದಗಿಸಲು ಸರ್ಕಾರದವರು ಉದ್ದೇಶಿಸಿರುವರೇ?

ಇ) ಇದಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು):-

ಅ) ಇಲ್ಲ.

ಆ) ಹೌದು.

ಇ) ಇದಕ್ಕೆ ತಗಲುವ ಅಂದಾಜು ವೆಚ್ಚ ರೂ. 31-95 ಲಕ್ಷ.

ಶ್ರೀ ರಾಮಲಿಂಗಾರೆಡ್ಡಿ :- ಸೆಂಟ್ರಲ್ ಲೈಬ್ರರಿಯಲ್ಲಿ ಮೈಕ್ರೋ ಫಿಲಂ ಸೌಲಭ್ಯ ಇದೆಯೇ ಎಂಬ ಪ್ರಶ್ನೆಗೆ ಇಲ್ಲ ಎಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಮತ್ತು ಪಟ್ಟಣ ಭಾಗದಲ್ಲಿ ಅವಶ್ಯಕತೆ ಇರುವಂತಹ ಕಡೆ ಮಾಡುತ್ತೇವೆಂದು ಹೇಳಿದ್ದಾರೆ. ಯಾವಾಗ ಮಾಡುತ್ತಾರೆಂದು ಪ್ರಶ್ನೆ ಕೇಳುತ್ತೇನೆ. ಹಾಗೆಯೇ ಸನ್ಮಾನ್ಯ ಮಂತ್ರಿಗಳಲ್ಲಿ ವಿನಂತಿ ಏನೆಂದರೆ ನನ್ನ ಪ್ರಶ್ನೆಯಲ್ಲಿ ಆ ವಿಚಾರ ಇಲ್ಲ. ಅಲ್ಲಿ ಸಾಕಷ್ಟು ಜಿರಾಕ್ಸ್ ಮಾಡುವುದಕ್ಕೆ ಜಿರಾಕ್ಸ್ ಮಿಷನ್ ಇಲ್ಲ. ಮತ್ತು ಪುಸ್ತಕಗಳಲ್ಲಿ ಇಂಪಾರ್ಟೆಂಟ್ ಪೇಪರ್‌ಗಳನ್ನು, ಯಾವುದು ಬೇಕೋ ಅದನ್ನು ಹರಿದುಕೊಂಡು ಹೋಗಿಬಿಟ್ಟಿರುತ್ತಾರೆ. ಮತ್ತೆ ಅಲ್ಲಿ ಬೆಳಕಿನ ವ್ಯವಸ್ಥೆ ಇಲ್ಲ. ಅದನ್ನೂ ಕೂಡ ತಾವು ಗಮನ ಹರಿಸಿ ವ್ಯವಸ್ಥೆ ಮಾಡಬೇಕು.

ಶ್ರೀ ಆರ್. ಕೃಷ್ಣಪ್ಪ :- ಈ ಜಿರಾಕ್ಸ್ ವ್ಯವಸ್ಥೆ ಸರಿ ಮಾಡುತ್ತೇವೆ ಮತ್ತು ಪುಸ್ತಕದಲ್ಲಿ ಇಂಪಾರ್ಟೆಂಟ್ ಪೇಪರ್ ಹರಿದುಕೊಂಡು ಹೋಗದ ಹಾಗೆ ಸೂಕ್ತ ವ್ಯವಸ್ಥೆ ಮಾಡಿ ನೋಡಿಕೊಳ್ಳುವಂತಹ ಹೆಚ್ಚು ಜವಾಬ್ದಾರಿಯನ್ನು ವಹಿಸಲಿಕ್ಕೆ ಮಾಡುತ್ತೇವೆ. 1996-97 ನೇ ಸಾಲಿನ ಯೋಜನೆ ಅಡಿಯಲ್ಲಿ ಮೈಕ್ರೋ ಫಿಲಂ ವ್ಯವಸ್ಥೆಗಾಗಿ 2-5 ಲಕ್ಷ ಇಡಲಾಗಿದೆ. ಬಹಳ ಇಂಪಾರ್ಟೆಂಟ್ ಪುಸ್ತಕಗಳನ್ನು ತಜ್ಞರ ಸಲಹೆ ಮೇರೆಗೆ ಅದನ್ನೇ ಮೊದಲು ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ :- ಅಧ್ಯಕ್ಷರೇ, ಈ ಮೈಕ್ರೋ ಫಿಲಂ ವ್ಯವಸ್ಥೆ ಎಂದರೇನು? ಎಲ್ಲಾ ಲೈಬ್ರರಿಗಳಿಗೆ ಇದನ್ನು ಒದಗಿಸುತ್ತೀರಾ?

ಶ್ರೀ ಆರ್. ಕೃಷ್ಣಪ್ಪ :- ಪ್ರಥಮವಾಗಿ ಮಾಡುತ್ತಿದ್ದೇವೆ; ಇದನ್ನು ಹಂತ ಹಂತವಾಗಿ ಮಾಡುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ :- ಮೈಕ್ರೋ ಫಿಲಂ ವ್ಯವಸ್ಥೆ ಅಂದರೇನು?

ಅಧ್ಯಕ್ಷರು :- ಡೀಟೇಲ್ಸ್ ಚರ್ಚೆ ಮಾಡೋಣ. ಅವರೇನು ಟೆಕ್ನೀಷಿಯನ್ನೆ? ನಿಮ್ಮ ಹಾಗೆ ಅವರೂ ಒಬ್ಬ ಎಂಎಲ್‌ಎ ; ಒಳ್ಳೆಯ ಪ್ರಶ್ನೆ. ತಮಗೆ ಗೊತ್ತಿದ್ದೂ ಗೊತ್ತಿದ್ದೂ ಏಕೆ ಕೇಳುತ್ತೀರಿ?